ಓ ಎಸ್ ನಂಬರ 106/2022
ಡಿ.ಡಬ್ಲ್ಯೂ 3

**ದಿನಾಂಕಃ 18.07.2025.**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ಮುಖ್ಯ ವಿಚಾರಣೆಃ ಪ್ರತಿವಾದಿ 3 ಮತ್ತು 4 ಪರ ಶ್ರೀ ಎಸ್ ಬಿ ಪಿ ವಕೀಲರಿಂದಃ

ನಾನು ಈ ದಾವೆಯಲ್ಲಿ 3ನೇ ಪ್ರತಿಯಾಗಿದ್ದು ನನ್ನ ಮುಖ್ಯ ವಿಚಾರಣೆ ಬದಲಿಗೆ ಅಫಿಡೆವಿಟನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲ ವಿಚಾರಗಳು ಸತ್ಯವಾಗಿರುತ್ತವೆ. ಓದಿ ನೋಡಿ ಸಹಿ ಮಾಡಿದ್ದೇನೆ.

ಪಾಟೀ ಸವಾಲು ವಾದಿ ಪರ ವಕೀಲರಿಂದಃ

ನಾನು ಪ್ರತಿವಾದ ಪತ್ರ ಹಾಗೂ ಸಾಕ್ಷಿ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನೀಡಿರುತ್ತೇನೆ. ದಾವಾ ಸ್ವತ್ತು ಬಿ ಶೆಡ್ಯೂಲ ಸ್ವತ್ತು ಎಂದರೆ ಸರಿ. ನನ್ನ ತಂದೆ ಡಿ ಗ್ರೂಪ್ ಹೊಂದಿದ್ದರು. ಅವರಿಗೆ 2800/- ರೂ. ಸಂಬಳ ಬರುತ್ತಾ ಇತ್ತು. ಸದರಿ ಮೊತ್ತ ನಮಗೆ ಹಾಗೂ ಕುಟುಂಬದವರನ್ನು ತೂಗಿಸಲು ಸಾಧ್ಯವಿರಲಿಲ್ಲ ಎಂದರೆ ಸರಿ. ವಾದಿ ಹಾಗೂ ನಾನು ದುಡಿಯುತ್ತಾ ಇದ್ದೆವು ಎಂದರೆ ಸರಿ. ನಾನು ದುಡಿದಂತಹ ಹಣ ನಮ್ಮ ತಂದೆ ಕೈಗೆ ಕೊಡುತ್ತಾ ಇದ್ದೆವು. ಸದರಿ ಹಣದಿಂದ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತೇವೆ ಎಂದರೆ ಸರಿ. 1 ನೇ ಪ್ರತಿವಾದಿ ನನಗಿಂತ ಸಣ್ಣವನು. ನನ್ನ ತಂದೆ ತೀರಿಕೊಂಡ ಸಮಯದಲ್ಲಿ ಅವರ ವಯಸ್ಸು 72 ಆಗಿತ್ತು. ಸದರಿ ಸ್ವತ್ತಿನಲ್ಲಿ ವಾದಿಗೂ ಸಹ ಹಕ್ಕು ಇರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿ ಖೊಟ್ಟಿ ಕಾಗದವನ್ನು ಮಾಡಿಕೊಂಡು ಪ್ರತಿವಾದಿ 2 ರವರ ಹೆಸರಿಗೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ವಾದಿಗೂ ದಾವಾ ಸ್ವತ್ತಿನಲ್ಲಿ ವಾದಿಗೂ ಸಹ 1/4 ಹಿಸ್ಸೆ ಬಂದಿರುತ್ತದೆ ಎಂದರೆ ಸರಿ.

ಮರುವಿಚಾರಣೆ ಇಲ್ಲ,

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾ.ಮತ್ತು ಜೆಎಂಎಫ್‌ಸಿ, ಬೈಲಹೊಂಗಲ